ಉಲ್ಲೇಖ:- ನಿಮ್ಮ ಪತ್ರ ಸಂಖ್ಯೆ:ಎಹೆಚ್‌ವೈ:124:96, ದಿ:3-5-96.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಹಾಲು ಮಹಾಮಂಡಳಿಯ ಅಧ್ಯಕ್ಷರಾದ ಶ್ರೀ ಹೆಚ್.ಡಿ. ರೇವಣ್ಣ, ಇವರು ಇಸ್ರೇಲ್‌ನಲ್ಲಿ ಜರುಗಲಿರುವ ಅಗ್ರಿಟೆಕ್-96 ಮತ್ತು ಜರ್ಮನಿ, ಆಸ್ಟ್ರೀಯ, ಇಟಲಿ, ಸ್ವಿಟ್ಜರ್‌ಲ್ಯಾಂಡ್, ಫ್ರಾನ್ಸ್ ಮತ್ತು ಯುನೈಟೆಡ್ ಕಿಂಗ್‌ಡಂ ದೇಶಗಳಲ್ಲಿನ ಡೈರಿ ಚಟುವಟಿಕೆಗಳನ್ನು ಅಧ್ಯಯನಕ್ಕಾಗಿ ದಿ:11-5-96 ರಿಂದ 20 ದಿವಸಗಳ ವಿದೇಶಿ ಪ್ರವಾಸಕ್ಕೆ ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರವು ಅನುಮತಿಸಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

1) ಮೇಲ್ಕಾಣಿಸಿದ ದೇಶಗಳ ವಿದೇಶ ಪ್ರವಾಸಕ್ಕೆ ತಗಲುವ ವೆಚ್ಚವನ್ನು ಕರ್ನಾಟಕ ಹಾಲು ಮಹಾಮಂಡಳಿಯೇ ಭರಿಸತಕ್ಕದ್ದು.

2) ಈ ವಿದೇಶ ಪ್ರವಾಸಕ್ಕೆ ಸಂಬಂಧಿಸಿದಂತೆ ತಗಲುವ ವೆಚ್ಚವನ್ನು ಭರಿಸಲು ವಿದೇಶಿ ವಿನಮಯಕ್ಕೆ ಸಂಬಂಧಿಸಿದಂತೆ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಅನುಮೋದನೆ (clearance) ಪಡೆಯತಕ್ಕದ್ದು.

ತಮ್ಮ ನಂಬುಗೆಯ

ಸಹಿ

ಸರ್ಕಾರದ ಅಧೀನ ಕಾರ್ಯದರ್ಶಿ,
ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.

ಚನ್ನಪಟ್ಟಣ ಮತ್ತು ನಾಗಶೆಟ್ಟಹಳ್ಳಿಯಲ್ಲಿ ಕೆ.ಎಂ.ಎಫ್. ಜಮೀನಿನ ವಿಸ್ತೀರ್ಣ

4898 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚನ್ನಪಟ್ಟಣ ಮತ್ತು ನಾಗಶೆಟ್ಟಿಹಳ್ಳಿಯಲ್ಲಿ ಕರ್ನಾಟಕ ಹಾಲು ಮಹಾ ಮಂಡಳದ ವಶದಲ್ಲಿರುವ ಜಮೀನಿನ ವಿಸ್ತೀರ್ಣವೇನು?*

ಆ) *ಕರ್ನಾಟಕ ಹಾಲು ಮಹಾಮಂಡಳವು ತನ್ನ ಬಳಕೆಗೆ ಅಗತ್ಯವಾಗಿದ್ದಾಗ್ಯೂ ಸಹ ಖಾಸಗಿಯವರಿಗೆ ಸಂಪೂರ್ಣ ಜಮೀನು ಅಥವಾ ಜಮೀನಿನ ಭಾಗವನ್ನು ನೀಡಿರುವುದು ಅಥವಾ ನೀಡಲು ಉದ್ದೇಶಿಸಿರುವುದು ವಾಸ್ತವ ಸಂಗತಿಯೇ?*

ಇ) *ಜಮೀನನ್ನು ಖಾಸಗಿಯವರಿಗೆ ನೀಡಲು ಅಳವಡಿಸಿಕೊಂಡ ಪದ್ಧತಿ ಏನು ಮತ್ತು ಈ ಪ್ರಸ್ತಾಪಗಳ ನಿಬಂಧನೆಗಳು ಮತ್ತು ಷರತ್ತುಗಳು ಏನು?*

ಈ) *ಈ ಬಗ್ಗೆ ಸರ್ಕಾರದಿಂದ ಅಗತ್ಯ ಅನುಮೋದನೆಯನ್ನು ಪಡೆಯಲಾಗಿದೆಯೇ? ಅನುಮೋದನೆಯ ಪ್ರತಿಗಳನ್ನು ಒದಗಿಸುವುದು?*

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) ಚನ್ನಪಟ್ಟಣ 35.34 ಎಕರೆ ನಾಗಶೆಟ್ಟಿಹಳ್ಳಿ 19 ಎಕರೆ ಮತ್ತು 07.5 (ಏಳೂವರೆ ಗುಂಟೆ) ಗುಂಟೆ

ಆ) ಇದು ವಾಸ್ತವ ಸಂಗತಿಯಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸಹಕಾರಿ ಸಂಸ್ಥೆಗಳು ನೀಡಿರುವ ಸಾಲ

4899 - ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳು ಒಟ್ಟು ರೈತರಿಗೆ ನೀಡಿರುವ ಸಾಲದ ಮೊತ್ತವೆಷ್ಟು?

ಆ) ಸಾಲ ವಸೂಲಾತಿ ಆಗಿರುವ ಮೊತ್ತವೆಷ್ಟು?

ಇ) ಸಾಲ ವಸೂಲಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

ಅ) 1999-2000 ನೇ ಸಾಲಿನಲ್ಲಿ ರೈತರಿಗೆ ನೀಡಲಾಗಿರುವ ಸಾಲ ಒಟ್ಟು ರೂ. 1,235.48 ಕೋಟಿ.

ಆ) 1999-2000 ನೇ ಸಾಲಿನಲ್ಲಿ ವಸೂಲಾಗಿರುವ ಮೊತ್ತ ರೂ. 1,085.74 ಕೋಟಿ.

ಇ) ಸುಸ್ತಿದಾರರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಕ್ರಮ ಹಾಗೂ ಆದ್ಯತೆ ಮೇರೆಗೆ ಉದ್ದೇಶ ಪೂರ್ವಕ ಸುಸ್ತಿದಾರರ ಸಾಲಗಳ ವಸೂಲಾತಿಗೆ ಕ್ರಮ ಇಡುವಂತೆ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಸಾಲ ವಸೂಲಾತಿಯಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸಿ ಮೇಲ್ವಿಚಾರಣೆ ನಡೆಸಲು ಇಲಾಖೆಯ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳೆಂದು ನೇಮಕ ಮಾಡಲಾಗಿದೆ.

ವಸತಿ ಇಲಾಖೆಯಲ್ಲಿ ಕಳಪೆ ಗೃಹಗಳು ಕಟ್ಟಿಸುತ್ತಿರುವುದು

4900 - ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಸತಿ ಇಲಾಖೆಯಿಂದ ಕಟ್ಟಿಸಿರುವ ಅನೇಕ ಮನೆಗಳು ತೀರ ದುಸ್ಥಿತಿಯಲ್ಲಿದ್ದು ಬೀಳುವ